# ಚೌಕಿ ಮನೆ



ಯಕ್ಷಗಾನವಿಂದು ರಾಜ್ಯ, ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿದೆ. ಅದರಲ್ಲೂ ಉತ್ತರ ಮತ್ತು ದಕ್ಷಿಣ ಕನ್ನಡಗಳಲ್ಲಿ ಹೆಚ್ಚು ಯಕ್ಷಗಾನ ಪ್ರಸಂಗಗಳು ಜರುಗುತ್ತವೆ. ಯಕ್ಷಗಾನ ಪ್ರದರ್ಶನ ಪೂರ್ವದಲ್ಲಿ ಚೌಕಿ ಮನೆ ಬೇಕೇ ಬೇಕು, ವೇಷ ಭೂಷಣಗಳನ್ನು ಕಟ್ಟಿ, ಬಣ್ಣ ಬಳಿದುಕೊಂಡು ತಯಾರಾಗಲು. ಅಲ್ಲದೆ ಕಿರೀಟವಿಟ್ಟು ಭಾಗವತ ಗಣಪತಿ ಪದ್ಯದೊಂದಿಗೆ ಪೂಜೆ ಸಲ್ಲಿಸಿ ದೇವರ ಆಶೀರ್ವಾದ ಪಡೆದು ರಂಗಸ್ಥಳಕ್ಕೆ ಅಪ್ಪಣೆ ಕೇಳುತ್ತಾರೆ. ವೇಷ ಭೂಷಣ ಕಟ್ಟಿ ತಯಾರಾಗಲು ಕನಿಷ್ಠ ಒಂದು ಗಂಟೆಯಾದರೂ ಬೇಕು. ರಾಜ, ಮಂತ್ರಿ, ರಾಣಿ, ಕಿರಾತ, ಹಾಸ್ಯ ಮುಂತಾದ ಪಾತ್ರಗಳು ಹುಟ್ಟಿಕೊಳ್ಳುತ್ತವೆ. ಕೆಲವರು ಅವರೇ ಬಣ್ಣ ಬಳಿದುಕೊಂಡು ಅಲಂಕಾರ ಮಾಡಿಕೊಳ್ಳುತ್ತಾರೆ. ಇನ್ನು ಕೆಲವರಿಗೆ ಬೇರೆಯವರು ಬಣ್ಣ ಬಳಿಯುತ್ತಾರೆ. ರಂಗಸ್ಥಳದ ಹಿಂದಿನ ಈ ಸ್ಥಳ ಚಾಕಿ ಮನೆ.

**ಚಿತ್ರ-ಬರಹ: ಗಣಪತಿ ಕಂಚಿಪಾಲ, ತೇಲಂಗಾರ**



# ಕೋತಿ ಓಡಿಸಲು ಟಾರ್ಚ್

ಕೋತಿಗಳ ಕಾಟ ಬಹುತೇಕ ಎಲ್ಲೆಡೆ ಇದೆ. ಬೆಳೆಗಾರರು ಬೆಳೆದ ಬೆಳೆಯ ಬಹುಪಾಲು ಕೋತಿಗಳ ಪಾಲಾಗುವುದು ಸಾಮಾನ್ಯವಾಗಿಬಿಟ್ಟಿದೆ. ಪೈಪ್‌ಗನ್, ಪಟಾಕಿ ಹೀಗೆ ಕೋತಿ ಓಡಿಸಲು ಹತ್ತಾರು ಪ್ರಯೋಗಗಳನ್ನು ಕೈಗೊಂಡರೂ ಅವ್ಯಾವುದೂ ಶೇ. ನೂರರಷ್ಟು ಯಶಸ್ಸನ್ನು ಕಂಡಿಲ್ಲ. ಆದರೆ ಇದೀಗ ಕೋತಿ ಓಡಿಸಲು 'ಟಾರ್ಚ್ ಲೈಟ್' ಮಾರುಕಟ್ಟೆಗೆ ಕಾಲಿರಿಸಿದೆ. ಪೆನ್ನಿನಂತೆ ಕಾಣುವ ಲೈಟ್‌ನಲ್ಲಿ ಎರಡು ಬ್ಯಾಟರಿಗಳಿದ್ದು ಅದರ ಬೆಳಕು ಕಿ.ಮೀ. ದೂರ ಬೀಳುತ್ತದೆ. ಬೆಳಕು ಕೋತಿಗಳ ಮೇಲೆ ಬಿದ್ದಾಗ ಕೋತಿಗಳು ಅಲ್ಲಿಂದ ಓಡಿ ಹೋಗುತ್ತವೆ. ಈ ಲೈಟ್ ಇದೀಗ ಬಹುಪ್ರಚಲಿತದಲ್ಲಿದ್ದು ಮಾರುಕಟ್ಟೆಯಲ್ಲಿ ಲಭ್ಯವಿದೆ.

**-ಚಂದ್ರಹಾಸ ಚಾರ್ಮಾಡಿ, ಬೆಳ್ತಂಗಡಿ**

# ಶುಭವಾಗುತ್ತೈತೆ ಸ್ವಾಮಿ ನಿಮ್ಗೆ..



ಬುಡು ಬುಡುಕೆ ಕಲೆ ಗೊಂದಲಿಗ ಪಂಗಡಕ್ಕೆ ಸೇರಿದ ಮರಾಠಿಗರಲ್ಲಿ ಕಂಡುಬರುತ್ತದೆ. ಕೈಯಲ್ಲಿ ಬುಡುಬುಡುಕೆ ಹಿಡಿದು ಲಯಬದ್ಧವಾಗಿ ನಾದ ಬರುವಂತೆ ಕಲಾತ್ಮಕವಾಗಿ ಬಾರಿಸುತ್ತಾ ಶಕುನ ನುಡಿದುಕೊಂಡು ಬಟ್ಟೆಬರೆ, ಭಿಕ್ಷೆ ತೆಗೆದುಕೊಂಡು ಜೀವನ ಸಾಗಿಸುವ ಇವರನ್ನು ನರ್ಸಣ್ಣ, ಕೊಟ ಕೊಟ ಪಕ್ಷಿ ಎಂದೂ ಕರೆಯುತ್ತಾರೆ.

ಕೆಂಪುಪೇಟ, ತಲೆಯಿಂದ ಗಡ್ಡದವರೆಗೆ ಅಡ್ಡಪಟ್ಟಿ, ಕಚ್ಚೆ ಪಂಚೆ, ಅಂಗಿ–ಕೋಟು, ಸೊಂಟಕ್ಕೆ ಕೆಂಪುವಸ್ತ್ರ, ಹಣೆಗೆ ಕುಂಕುಮ, ಕೈಯಲ್ಲಿ ತಾಳೆಗರಿ, ಕಂಕುಳಲ್ಲಿ ಹಿಂದೆ ಮುಂದೆ ಇಳಿಬಿಟ್ಟಿರುವ ಜೋಳಿಗೆ ಚೀಲಗಳು ಇವರ ವೇಷಭೂಷಣ. ಡಮರುಗದ ಆಕೃತಿಯ ಚರ್ಮವಾದ್ಯಕ್ಕೆ ನೆರಳಿನಲ್ಲಿ ಒಣಗಿಸಿದ ಆಡಿನ ಜಠರದ ಚರ್ಮವನ್ನು ಬಿಗಿಯುತ್ತಾರೆ. ಇದರ ಮಧ್ಯಕ್ಕೆ ತುದಿಯಲ್ಲಿ ಗಂಟುಹಾಕಿರುವ ದಾರವನ್ನು ಕಟ್ಟಿ ಎಡಕ್ಕೂ ಬಲಕ್ಕೂ ಆಡಿಸಿದಾಗ ಗಂಟು ಅದರ ಮುಖಕ್ಕೆ ತಾಗಿಸಿ ಶಬ್ದ ಉಂಟಾಗುತ್ತದೆ. ನಿಶ್ಶಬ್ದ ವಾತಾವರಣದಲ್ಲಿ 'ಬುಡು ಬುಡು ಬುಡುಕ್, ಕೊಟ ಕೊಟ ಕೊಟಕ್' ಎಂಬ ಈ ವಿಶಿಷ್ಟ ಸದ್ದು ಎಷ್ಟು ದೂರಕ್ಕೂ ಕೇಳಿಸಬಲ್ಲದು.

ಬೆಳಿಗ್ಗೆ ದೇವರನ್ನು ಪೂಜಿಸಿ ವೇಷ ಧರಿಸಿ ಮನೆಗಳಿಗೆ ಹೋಗಿ 'ಹಾಲಕ್ಕಿ ಶಾಸ್ತ್ರ' ನುಡಿಯುತ್ತಾರೆ. ಅಂಗಳದಲ್ಲಿ ನಿಂತು ವಾದ್ಯ ಬಾರಿಸುತ್ತಾ 'ಜಯವಾಗಲಿ ಸ್ವಾಮಿ ನಿಮಗೆ ಜಯವಾಗಲಿ, ಶ್ರೀಕೃಷ್ಣ ನುಡಿಸಿದಂತೆ ನುಡಿಯುತ್ತೇವೆ' ಎಂದು ಭವಿಷ್ಯ ಹೇಳುವ ಇವರಿಗೆ ಶ್ರೀಕೃಷ್ಣನೇ ಮೂಲ ಪುರುಷನಂತೆ.

**ಚಿತ್ರ-ಬರಹ: ಡಾ.ವೇಣುಗೋಪಾಲ ಶರ್ಮಾ, ಗುರುವಾಯನಕೆರೆ**